ಮೇಷ್ಟ್ರು ಶಿಷ್ಯನೇ ಆಗಿದ್ದವನೊಬ್ಬನ ಕೈಚಳಕದ ಬೆಳಕು ನೆಳಲಿನ ಆಟ. ಎಲ್ಲ ಸೇರಿ ಅದ್ಭುತವಾದ ಕಿನ್ನರ ಲೋಕವೇ ಸೃಷ್ಟಿಯಾಗಿತ್ತು. ಹತ್ತು ಹಲವು ಮನರಂಜನಾ ಕಾರ್ಯಕ್ರಮಗಳಿದ್ದರೂ ಜನರ ಬಾಯಿಯಲ್ಲಿ ಮತ್ತು ಮನದಲ್ಲಿ ನಲಿದಾಡಿದ್ದು ಈ ನೃತ್ಯ ರೂಪಕವೇ.

ರಾಗಿಣಿ ಆ ಹೊಗಳಿಕೆಯ ಹೆಮ್ಮೆಯಲ್ಲಿ ಬೀಗುತ್ತಿದ್ದರೆ ಕೃಷ್ಣ ಮಾತ್ರ ಕನಸು ಕಾಣಲು ತೊಡಗಿದ್ದ. ಅವನ ಕನಸುಗಳಲ್ಲೆಲ್ಲ ರಾಗಿಣಿಯೇ. ಬೊಗಸೆಕಂಗಳ ರಾಧೆ. ಕೃಷ್ಣನಿಗಾಗಿ ಹಂಬಲಿಸುತ್ತಿದ್ದ ಬೃಂದಾವನದ ರಾಧೆ. ವರ್ಷದ ಕೊನೆಯಲ್ಲಿ ಒಂದು ದಿನ ಯಾರೂ ಇಲ್ಲದ ಸಮಯ ನೋಡಿ ರಾಗಿಣಿಯ ಹತ್ತಿರ ಹೇಳಿಯೇ ಬಿಟ್ಟಿದ್ದ ತನ್ನ ಮೆಚ್ಚುಗೆಯನ್ನು... ತನ್ನ ಆಸೆಯನ್ನು ತೋಡಿಕೊಂಡಿದ್ದ... ತನ್ನ ಪ್ರೀತಿಯನ್ನು ನಿವೇದಿಸಿಕೊಂಡಿದ್ದ. ಕೆರಳಿದ ಕಾಳಿಯಾಗಿದ್ದಳು ರಾಗಿಣಿ. ಹುಡುಗನೊಬ್ಬ ತನ್ನೊಡನೆ ಅನುಚಿತವಾಗಿ ನಡೆದುಕೊಂಡದ್ದಕ್ಕಲ್ಲ. ಯಾರನ್ನು ಕಪ್ಪು ಬಣ್ಣದವನು ಎಂದು ಮನಸ್ಸಿನ ಆಳದಿಂದ ದ್ವೇಷಿಸುತ್ತಿದ್ದಳೋ ಅವನಿಂದ ಮೆಚ್ಚುಗೆಯ ಮಾತು ಬಂದದ್ದರಿಂದ. ಅದರಲ್ಲಿ ಒಲವಿನ ಸುಳಿ ಕಂಡದ್ದರಿಂದ. 'ಮನೆಯಲ್ಲಿ ಕನ್ನಡಿಯಿದ್ದರೆ ನಿನ್ನ ಮುಖ ನೋಡಿಕೋ' ಎಂದಿದ್ದಳು. ಅಷ್ಟೇ ಹೇಳಿ ಬಿರುಗಾಳಿಯಂತೆ ಹೋಗಿಯೇ ಬಿಟ್ಟಿದ್ದಳು – 'ತಾನು ಹೇಳಬೇಕಾದುದನ್ನೆಲ್ಲ ಆ ಒಂದು ಮಾತಿನಲ್ಲಿಯೇ ಹೇಳಿಬಿಟ್ಟಿದ್ದೇನೆ' ಎನ್ನುವವಳಂತೆ. ಇವ ಮರಗಟ್ಟಿ ನಿಂತಿದ್ದ.

ಹೈಸ್ಕೂಲು ಮುಗಿಸಿ ಇಬ್ಬರೂ ಒಂದೇ ಕಾಲೇಜಿಗೆ ಸೇರಿದ್ದರು. ಹೈಸ್ಕೂಲು ಪಾಸು ಮಾಡುವುದು ಯಾರಿಗೂ ಕಷ್ಟವಾಗಿರಲಿಲ್ಲವಾದದ್ದರಿಂದ ಇಡೀ ಗುಂಪೇ ಕಾಲೇಜಿನ ಮೆಟ್ಟಲು ಹತ್ತಿತ್ತು. ಹೈಸ್ಕೂಲಿನ ಪಕ್ಕದಲ್ಲಿಯೇ ಇದ್ದ ಕಾಲೇಜು. ಕಟ್ಟಡವೊಂದು ಬೇರೆ ಎನ್ನುವುದು ಬಿಟ್ಟರೆ ಅದೇ ಗುಂಪು. ಅದೇ ಗೆಳೆಯ ಗೆಳತಿಯರು. ಹತ್ತು ಹದಿನೈದು ನಿಮಿಷದ ಅದೇ ದಾರಿ. ಹೈಸ್ಕೂಲಿಗೆ ಹೋಗುವಾಗ ಹೊರೆ ಹೊರೆ ಪುಸ್ತಕಗಳನ್ನು ಹೊತ್ತುಕೊಂಡು ಹೋಗುತ್ತಿದ್ದ ಅವರ ಕೈಯ್ಯಲ್ಲಿ ಈಗ ಒಂದೇ ಒಂದು ನೋಟ್‌ಬುಕ್ ಮಾತ್ರ. ಅಷ್ಟೆ ವ್ಯತ್ಯಾಸ.

ರಾಗಿಣಿ ಮತ್ತು ಕೃಷ್ಣ ಒಂದೇ ಗುಂಪು ಮತ್ತು ಹೆಚ್ಚು ಕಡಿಮೆ ಒಟ್ಟೊಟ್ಟಿಗೇ ಹೋಗುತ್ತಿದ್ದರೂ ಮತ್ತೆ ಕೃಷ್ಣ ತನ್ನ ಪ್ರೀತಿಯನ್ನು ಪ್ರದರ್ಶಿಸುವ ಧೈರ್ಯ ಮಾಡಲಿಲ್ಲ. ಆದರೆ ಆತನ ಮೆಚ್ಚಿಗೆಯೇನೂ ಕಡಿಮೆಯಾಗಿರಲಿಲ್ಲ. ಸಂದರ್ಭ ಸಿಕ್ಕಾಗಲೆಲ್ಲ ಅವಳತ್ತ ಮೆಚ್ಚಿಗೆಯ ನೋಟ ಹರಿಸುತ್ತಿದ್ದ ಮತ್ತು ಅವಳ ಬೆದರಿಸುವ ನೋಟ ತನ್ನ ಮೇಲೆ ಬೀಳುತ್ತದೆಯೆನ್ನುವಾಗ ದೃಷ್ಟಿ ತಪ್ಪಿಸುತ್ತಿದ್ದ. ತರಗತಿಯಲ್ಲಿ ಲೆಕ್ಚರರು ಕೇಳುವ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡುವ ತಾಕತ್ತಿದ್ದ ಅವನನ್ನೇ ಕೇಳುವ ಎಲ್ಲ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನೇ ಕೊಡುತ್ತಿದ್ದವ ತಪ್ಪದೇ ರಾಗಿಣಿಯೆಡೆಗೆ ಒಂದು ಹೆಮ್ಮೆಯ ನೋಟ ಎಸೆಯುತ್ತಿದ್ದ ಮತ್ತು ಅವಳು ತನ್ನನ್ನು ಗಮನಿಸುತ್ತಿದ್ದಾಳೆ ಎನ್ನುವುದನ್ನು ಖಚಿತಪಡಿಸಿಕೊಳ್ಳುತ್ತಿದ್ದ. ಅದು ದಿನವಿಡೀ ಅವನನ್ನು ಖುಷಿಯಲ್ಲಿಡುತ್ತಿತ್ತು.

ಕಾಲೇಜಿನ ಪ್ರಥಮ ವರ್ಷದಲ್ಲಿನ ಒಂದು ದಿನ ಬೆಳಿಗ್ಗೆ. ಲೆಕ್ಚರರು ಬಂದಿರಲಿಲ್ಲ. ಹೊರ ಹೋಗಲು ಸಾಧ್ಯವಾಗದಂತೆ ಧೋ ಎಂದು ಮಳೆ ಸುರಿಯುತ್ತಿತ್ತು. ಕಾಲೇಜು ಲೈಬ್ರರಿಗೆ ಹೋಗಬೇಕೆಂದರೂ ಮಳೆಯಲ್ಲಿ ನೆನೆದುಕೊಂಡೇ ಹೋಗಬೇಕಿತ್ತು. ಮಳೆಗೆಂದು ಕೊಡೆ ತರಲು ಅವರೇನು ಹೈಸ್ಕೂಲು ಮಕ್ಕಳೇ. ಹೊರಗಡೆಯ ಮಳೆಯ ಸದ್ದಿಗಿಂತ ತರಗತಿಯೊಳಗೆ ಇವರ ಗಲಾಟೆಯ ಸದ್ದೇ ಜಾಸ್ತಿಯಾಗಿತ್ತು. ಹೀಗೇ ಬಿಟ್ಟರೆ ಅಕ್ಕ ಪಕ್ಕದ ತರಗತಿಯ ಲೆಕ್ಚರುಗಳೇನು, ಮಕ್ಕಳೇ ಬಂದು ಬೈಯ್ಯುತ್ತಿದ್ದರೇನೋ. ನಿಧಾನವಾಗಿ ಎದ್ದ ಕೃಷ್ಣ 'ಅಲ್ಲ ಹೀಗೆ